Doc-4
T-P-2

Reg No B G 155 15 — 4 —72

55 th Year of Publication ★ Satyavadi Daily, Mysore 4

In the Sta e - The First
Golden Jubilee
Celebrated Paper
★
News, Views, Dharmic
Moral Ethical Matters



ರಾಜ್ಯದಲ್ಲಿ ಪ್ರಥಮ
ಸಹಿಷ್ಣು ಜಿ
ಮಹೋತ್ಸವ
ನಿರಪೇಕ್ಷಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಏರಸ್ಟೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು ಧರ್ಮಪ್ರಚಾರಧುರೀಣ ಎಂ ಎಸ್ ಕೃಷ್ಣರಾವ್ [2 ಪೈಸೆ

ಚಳುವಳಿ ಹೂಡುವುದಾಗಿ ಜನಸಂಘದ ಬೆದರಿಕೆ

ಉಳಿತಾಯ

ಮೈಸೂರು— ರಾಷ್ಟ್ರೀಯ ಯೋಜನೆಗೆ ಮೈಸೂರು ಜಿಲ್ಲೆಯು 71–72 ಸಾಲಿನಲ್ಲಿ ಪ್ರಥಮ ತಿಂಗಳ ಒಟ್ಟು 1 ಕೋಟಿ 14 ಲಕ್ಷ ರೂಗಳನ್ನು ಹಾಗೂ ನಿಧಿಯ 33 ಲಕ್ಷ ರೂಗಳನ್ನೂ ಶೇಖರಿಸಿ ಗುರಿಯನ್ನು ಸಾಧಿಸಿದೆ

★

ಲಾಟರಿಯಿಂದ ಲಾಭ

ಬೆಂಗಳೂರು— ರಾಜ್ಯದ ಲಾಟರಿ ಯೋಜನೆಯಲ್ಲಿ 69–70 ರಲ್ಲಿ ಆದಾಯಕ್ಕಿಂತಲೂ ವೆಚ್ಚವೇ ಅಧಿಕವಾಗಿ ನಷ್ಟವಾಗಿದೆಯೆಂದು ಕೆಲವೊಂದು ಪತ್ರಿಕೆ ಪ್ರಕಟಿಸಿರುವುದು ನಿಜವಾದುದಲ್ಲವೆಂದೂ, ಆ ವರ್ಷದ ಲೆಕ್ಕಪತ್ರ ಪರಿಶೀಲನಾ ವರದಿಯಲ್ಲಿ ನಿವ್ವಳ ಲಾಭ ರೂ 98 96 ಲಕ್ಷವೆಂದು ತಿಳಿಸಲಾಗಿದೆಯೆಂದೂ ಸ್ಪಷ್ಟವಾಗಿದೆ.

★

ಅಸ್ಪೃಶ್ಯತೆ ಅಪರಾಧಗಳು

ನವದೆಹಲಿ— ಅಸ್ಪೃಶ್ಯತೆ ಅಪರಾಧಗಳಿಗೆ ಖಡ್ಡಾಯವಾಗಿ ಜೈಲು ಶಿಕ್ಷೆ ವಿಧಿಸಬೇಕೆಂಬ ಮಸೂದೆ ಪಾರ್ಲಿಮೆಂಟಿನಲ್ಲಿ ತರಲಾಗಿದೆ.

○

ಪ್ರಾಣಕ್ಕೆ ಪ್ರಾಣ

ಸೆಂಟ್ ಆಲ್ಬನ್ಸ್— ಭಾರತೀಯ ಡಾ॥ ಉಷಾ ರಾಮಕೃಷ್ಣ ಹಿರಬೇಕರ್ ತಾನು ನಡೆಸಿದ ಆಪರೇಷನ್ನಿನಲ್ಲಿ 3 ಮಕ್ಕಳ ತಾಯಿಯೊಬ್ಬಳು ಸತ್ತು ಹೋದುದಕ್ಕೆ ಮರುಗಿ, ತಾನೂ ವಿಷದ ಇಂಜಕ್ಷನ್ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಂಡಳು.

○

ಗೋಧಿ ಬೆಲೆ

ನವದೆಹಲಿ— ಗೋಧಿ ಕೊಳ್ಳುವ ಬೆಲೆಯನ್ನು ಕಡಮೆ ಮಾಡಬಾರದೆಂದು ಮುಖ್ಯ ಮಂತ್ರಿಗಳ ಸಮ್ಮೇಳನ ಶಿಫಾರಸು ಮಾಡಿದೆ

ಪಾನನಿರೋಧ

ನವದೆಹಲಿ – ಗುಜರಾತಿನಲ್ಲಿ ಪಾನನಿರೋಧವನ್ನು ರದ್ದು ಪಡಿಸುವುದಿಲ್ಲವೆಂದು ಪ್ರೆಸ್ ಕ್ಲಬ್‌ನಲ್ಲಿ ಗುಜರಾತು ಮುಖ್ಯಮಂತ್ರಿಯವರು-ಹೇಳಿದರು.

●

ನದೀ ನೀರು

ಬೆಂಗಳೂರು— ಅಂತರರಾಜ್ಯಗಳ ನದಿನೀರು ಹಂಚಿಕೆ ಬಗ್ಗೆ ಕೇಂದ್ರಕ್ಕೆ ರಾಜ್ಯಾಂಗ ಅಥವಾ ಮತ್ಯಾವ ಶಾಸನದಿಂದಾಗಲೀ ಅಧಿಕಾರವಿಲ್ಲವೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು

★

ಸುಪ್ರೀ ಕೋರ್ಟು ತೀರ್ಪು

ನವದೆಹಲಿ— ಯಾವ ರಾಜ್ಯ ಶಾಸನಸಭೆಯಲ್ಲಾಗಲೀ ಪದವೀಧರರ ಪ್ರತಿನಿಧಿಯು ಪದವೀಧರನಾಗಿರ ಬೇಕಾಗಿಲ್ಲವೆಂದು ಸುಪ್ರೀಂ ಕೋರ್ಟು ತೀರ್ಪಿತ್ತಿದೆ

★

ಶಾಸನಸಭೆ

ಬೆಂಗಳೂರು— ಶನಿವಾರ ಮುಗಿಯಬೇಕಾಗಿದ್ದ ಶಾಸನಸಭಾಧೀವೇಶನದ ಅವಧಿಯು ಬುಧವಾರದವರಿಗೆ ಹೆಚ್ಚಿಸಲಾಗಿದೆ

●

ಬೆಲೆ ತಗ್ಗಿಸಿದರೆ ಚಳವಳಿ

ಅಹಮದಾಬಾದು— ಗೋಧಿ ಪಡೆಯುವ ಬೆಲೆಯನ್ನು ಸರಕಾರ ಕಡಮೆ ಮಾಡಿದರೆ, ಜನಸಂಘ ದೇಶಾದ್ಯಂತ ಚಳವಳಿ ಹೂಡುವುದೆಂದು ಸಂಘದ ಅಧ್ಯಕ್ಷ ಶ್ರೀ ವಾಜಪೇಯಿ ಹೇಳಿದರು.

★

ಮುದುವೆ ವಯಸ್ಸು

ನವದೆಹಲಿ— ಕೇಂದ್ರ ಸರಕಾರ ಹುಡುಗಿಯರು ಮದುವೆಯಾಗಬಹುದಾದ 15 ವರ್ಷ ವಯಸ್ಸನ್ನು 16 ಕ್ಕೆ ಹೆಚ್ಚಿಸಲು ಸರಕಾರ ಯೋಜಿಸಿದೆ

ಎಫ್. ಎಲ್ ಮತ್ತು ಬಿ ಎಲ್ ಪರೀಕ್ಷೆ

ಮೈಸೂರು— ಮೈಸೂರು ವಿಶ್ವವಿದ್ಯಾನಿಲಯದ ಎಫ್ ಎಲ್ ಪರೀಕ್ಷೆಯು ಮೇ 8 ರಿಂದ 13 ರವರೆಗೂ. ಬಿ ಎಲ್ ಪರೀಕ್ಷೆಯು ಮೇ 15 ರಿಂದ 22 ರವರೆಗೂ ನಡೆಯುವುದು

★

ನವೀನ ರೀತಿಯ ಶಿಕ್ಷೆ

ರೋಚೆಸ್ಟರ್— ಅತಿ ವೇಗವಾಗಿ ಮೋಟಾರು ನಡೆಸಿದ ಥಾನುಷ್ ರಿಟ್ಟೆ ಎಂಬ ಯುವಕನಿಗೆ 48 ಗಂಟೆ-ಕಾಲ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುವ ಶಿಕ್ಷೆ ವಿಧಿಸಲಾಯಿತು

○

ಬೂಕಂದಾಯ

ಬೆಂಗಳೂರು— 10 ಎಕ್ರೆ ಹೊಲಗಳ ಮೇಲೆ ಮಾತ್ರವಲ್ಲದೆ ಎಲ್ಲಾ ಬೂಕಂದಾಯ ವಜಾ ಮಾಡುವ ವಿಷಯವನ್ನು ಸರಕಾರ ಪರಿಶೀಲಿಸುತ್ತಿದ್ದು, ಬೇಗನೆ ನಿರ್ಧರಿಸಲಾಗುವುದೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು

●

ಗಡಿ ವ್ಯಾಜ್ಯ

ನವದೆಹಲಿ.... ಮಹಾರಾಷ್ಟ್ರ–ಮೈಸೂರು ಗಡಿವ್ಯಾಜ್ಯವು ಕ್ಷಿಪ್ರದಲ್ಲೇ ಇತ್ಯರ್ಥ ಮಾಡುವುದಾಗಿ ಪ್ರಧಾನಿಯವರು ತಮಗೆ ತಿಳಿಸಿರುವರೆಂದು ಮುಖ್ಯ ಮಂತ್ರಿ ಶ್ರೀ ದೇವರಾಜ್ ಅರಸರು ಹೇಳಿದರು.

★

ಮಂತ್ರಿಗಳ ಆಸ್ತಿ-ಸಾಲ ವಿವರ

ಬೆಂಗಳೂರು— ರಾಜ್ಯದ ಎಲ್ಲಾ ಮಂತ್ರಿಗಳೂ ಪ್ರತಿ ವರ್ಷ ಮಾರ್ಚ್ 31 ರೊಳಗೆ ತಮ್ಮ ಆಸ್ತಿ-ಸಾಲದ ಸಂಪೂರ್ಣ ವಿವರವನ್ನು ಮುಖ್ಯಮಂತ್ರಿಗಳಿಗೆ ಕೊಡಬೇಕೆಂದು ತಿಳಿಸಲಾಗಿದೆ. ಈ ಶಾಸನ ಸಭೆಯಲ್ಲಿ ತಿಳಿಸಲಾಯಿತು

ಎಚ್ಚರಿಕೆಯಿಂದಿರಲಾಗಿದೆ

ನವದೆಹಲಿ— ಯಾವ ವಿದೇಶೀ ನಿಯೋಗವಾಗಲೀ, ಅದರ ಸದಸ್ಯರಾಗಲೀ ನಮ್ಮ ರಾಷ್ಟ್ರ ಹಿತಕ್ಕೆ ಧಕ್ಕೆ ತರದಂತೆ, ಅವರ ಚಟುವಟಿಕೆಯನ್ನು ಎಚ್ಚರಿಕೆಯಿಂದ ನೋಡಿಕೊಳ್ಳಲಾಗುತ್ತಿದೆಯೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

❁

ಲಾಟರಿ

ಬೆಂಗಳೂರು— ಶ್ರೀ ಸತ್ಯನಾರಾಯಣರಾಯರು ವಿಧಾನ ಪರಿಷತ್ತಿನಲ್ಲಿ ಲಾಟರಿ ವಜಾಮಾಡಬೇಕೆಂದು ತಂದಿದ್ದ ಮಸೂದೆಗೆ ಹಲವರು ಬೆಂಬಲವಿತ್ತರು : ಕೆಲವರು ಇದನ್ನು ವಿರೋಧಿಸಿ. ಇದರಿಂದ ಅನೇಕರಿಗೆ ಪ್ರಯೋಜನ ವಾಗುತ್ತಿತ್ತೆಯೆಂದೂ ನಿಲ್ಲಿಸಿದರೆ ಈ ಹಣವೆಲ್ಲಾ ಇತರ ರಾಜ್ಯಗಳ ಲಾಟರಿಗಳಿಗೆ ಹೋಗುವುದೆಂದೂ, ನಿಬಂಧನೆಗಳಲ್ಲಿ ಅವಶ್ಯಕ ಬದಲಾವಣೆ ಮಾಡಬಹುದೆಂದೂ, ಹೆಚ್ಚು ಜನರಿಗೆ ಬ್ರಹ್ಮಾನ ಬರುವಂತೆ ಬಹುಮಾನಗಳ ಸಂಖ್ಯೆ ಹೆಚ್ಚಿಸಬೇಕೆಂದೂ ಹೇಳಿದರು

❁

ಡಕಾಯಿತರ ಶರಣಾಗತಿ

ಭೋಪಾಲ್— ಅವನ ತಲೆಗೆ 3 ಲಕ್ಷ ಬೆಲೆ ಇಡಲಾಗಿದ್ದ ಡಕಾಯಿತರ ನಾಯಕ ಮೋಹರ್‌ಸಿಂಗ್ ಮತ್ತು ಚಂಬಾಲ್ ಕಣಿವೆಯ 84 ಡಕಾಯಿತರು ಚೌರಾ ಪಟ್ಟಣದಲ್ಲಿ ಸರ್ವೋದಯ ನಾಯಕ ಶ್ರೀ ಜಯಪ್ರಕಾಶನಾರಾಯಣರಿಗೆ ಶರಣಾಗತರಾದರು – ಮುಖ್ಯಮಂತ್ರಿ ಶ್ರೀ ಸೇಥಿ ಅವರಿಗೆ ಹಸ್ತಲಾಘವ ಕೊಟ್ಟರು – ಅವರಿಗೆಲ್ಲಾ ಒಂದೊಂದು ರಾಮಾಯಣ ಪ್ರತಿ ಕೊಡಲಾಯಿತು

★ ಇಸ್ಲಾಮಾಬಾದ್— ಪಾಕಿಸ್ತಾನದಲ್ಲಿ ಮಿಲಿಟರಿ ಶಾಸನ ತಾ॥ 21 ರಂದ ತೆಗೆಯಾಕಲಾಗುವುದು.

ಘಾಡೀ ಪುರಾಣ

ತದಬ್ದಿಗಳಿಗೆ ಟ್ರೀಡ್ ಮೂರ್ಕ್ ಅತರುವ ಧಾಡಿ ಮಾಸಿಗಳು, ಶೂರರಿಗೆ, ಪಟ್ಟಿಗಳಿಗೆ. ಪೌರುಷದ ಸಂಕೇತವೂ ಸಿಜ. ಹಿಂದಿನ ಅರಸರ ಭಾರಿ ಮಾಸಿಗಳಿಗೆ ಎಣ್ಣೆ ಸೀರು ಹಾಕಿ, ನಾಲೀರುಮೂಡಿ, ಹೆಗಲಲ್ಲಿ ಹೊತ್ತುಕೊಂಡು (ಮಾಸಿಗಳೊಂ ನಗೆ) ಹೋಗಲು ಊರವರಾಗುತ್ತಿದ್ದರು ಮಾಸೆಯ ತುದಿಯಲ್ಲಿ ಲಿಂಬೇಹಣ್ಣು ಇ ಳುತಂಥ ಗಲ್ಲಿ ಮಾಸೆಯು ಇಳ್ಳದರಿಸ್ಪರು ಪಂಜಾಬು ರಣಜಿತ್‌ಸಿಂಗನ ಕಾಲ ವಲ್ಲಿ ಪತ್ರಿ ವಸ್ತ್ರವೂ ಏರ್ಪಾಟಾಗುತ್ತಿದ್ದ ದಾಡಿಗಳ ಸಂತೆಯಲ್ಲಿ ಒಳ್ಳೆಯ ದಾಡಿ ಇರುವವರಿಗೆ ನೂರು ರೂಪಾಯಿ ಒಹುಮಾನ ಕೊಡುತ್ತಿದ್ದರು ಈಜಿಪ್ಟಿನ ರಾಣಿ ಹತ್ ಷೂಟಳ ಕಾಲದಲ್ಲಿ ಸ್ತ್ರೀಯರೂ ಕೃತಕ ಮಾಸಿ ಧರಿಸುತ್ತಿದ್ದರು ಅಬ್ರಾಹಂ ಲಿಂಕನ್ ಗಡ್ಡಮಾಸಿ ಬೆಳೆಸಿದುದರಿಂದ ಅದೃಷ್ಟವಂತನಾವಣೆಯಲ್ಲಿ ಗೆದ್ದರೆನ್ನಲಾಗಿದೆ. ಫ್ರಾನ್ಸಿನ ಒಬ್ಬ ಚಕ್ರವರ್ತಿ ನೀಲಮಾಸಿಯಲ್ಲಿ ಮುಳ್ಳು ಜೋಕಾಲಿಯಾಡುತ್ತಿದ್ದರು. ಮುಸಲ್ಮಾನರಿಗೆ ಪವಿತ್ರವಾದ ಪಾಪಿಯ ರೋಮ ಕಿತ್ತರೆ ಅದನ್ನು ಸಂಗ್ರಹಿಸಿ ಧಾರಿಕ ಸಂಸ್ಕಾರದಲ್ಲಿ ಹೂಳುತ್ತಿದ್ದರು ಸೈಗಂಬರಿನ ರೋಮಗಳು ಈಗಲೂ ಕಾಶ್ಮೀರದಲ್ಲಿ ರಕ್ಷಿಸಲ್ಪಟ್ಟಿವೆ ತಕ್ಕಷ್ಟವನ್ನಳ್ಳ ವಿಷಯಾಧಿಗಳಿಗೆ ಗಡ್ಡಮಾಸಿ ಬೋಳಿಸಿದರೆ ಅದು ಅಪಮಾನಕರ ಶಿಕ್ಷೆಯಾಗಿತ್ತು ಅಲ್ಲ ಗುಲಾಮರು ಮಾತ್ರ ಗಡ್ಡ ಬೋಳಿಸಿ ಕೊಳ್ಳುತ್ತಿದ್ದರು.

— ಪ ರಂಮಕೃಷ್ಣ ಶಾಸ್ತ್ರಿ [ಕೃ. ಸಂ]

★

ಹಾಲು

ವಿಷಿಗ್ಧ— ಹಾಲು ಸಿಮ್ಮ ಮೂಳೆಗಳಿಗೆ ಒಳ್ಳೆಯದಾದರೂ. ಹೆಚ್ಚು ನೇ ನ್ಯೆಯಿಂದ ಅದರ ಬೆಣ್ಣೆಕೆಲಬು ಹೃದಯಕ್ಕೆ ತೊಂದರೆಯುಂಟುಮಾಡುವದೆಂದು ಡಾ॥ ಫಾರೆಸ್ಟ್ ಅತಮ್ಸ್‌ಹೇಳಿರುವರು.

Help The Gorakshana

— Humanitari n Propoganda Monthly ....

★

Protect the Cow

★

Quality Print & Neat Binding

Lakshminarasimha Press

Sivarampet, Mysore

ಮಾನವನು ಕೀಳು ಸೃಷ್ಟಿಯ ಧಣಿ; ಕ್ರಿಸ್ತನೆನ್ನುವದು ಸೊಕ್ಕಿನ ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಆನೆ - ಹುಡುಗ

ಹೊಸ ರೀತಿಯ ತಿರುವಳಿಕೆ ಕೊಡುವ ಆಕರ್ಷಣೀಯ ಚಿತ್ರ

ಕುಟುಂಬ ಯೋಜನ

ದೇಶ ಹಿತಕ್ಕಾಗಿ

ಪ್ರಗತಿ ಚಿತ್ರ ಇಂಟರ್ ನ್ಯಾಷನಲ್‌ರವರ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ

ಗಂಗಾ ತೇರಾ ಪಾನಿ ಅಮೃತ್

ಪಾತ್ರ : ಅಶೋಕ ಕುಮಾರ್, ನವೀನ್ ನಿಶ್ಚಲ್, ಜೋಗಿಂದರ್ ಬಾಲಿ, ಶತ್ರುಘ್ನ ಸಿನ್ಹಾ, ಪ್ರಾಣ್, ರೆಹಮಾನ್, ನಿರೂಪರಾಯ್ ಮುಂತಾದವರು

ಸಂಗೀತ – ರವಿ (ದಿನ 3 ಪ್ರದರ್ಶನಗಳು) ನಿರ್ದೇಶನ – ವಿನೋದ್ರಸಿನ್ಹಾ

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ನಾಂದಿ

ವುಡ್‌ಲಾಂಡ್ 14-4-72 ರಿಂದ ಆಮೋಘ 3ನೇ ವಾರ

ಪ್ರಗತಿ ಚಿತ್ರ ಇಂಟರ್ ನ್ಯಾಷನಲ್‌ರವರ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ

ಗಂಗಾ ತೇರಾ ಪಾನಿ ಅಮೃತ್

ಪಾತ್ರ : ಅಶೋಕ ಕುಮಾರ್, ನವೀನ್ ನಿಶ್ಚಲ್, ಜೋಗಿಂದರ್ ಬಾಲಿ, ಶತ್ರುಘ್ನ ಸಿನ್ಹಾ, ಪ್ರಾಣ್, ರೆಹಮಾನ್, ನಿರೂಪರಾಯ್ ಮುಂತಾದವರು

ಸಂಗೀತ – ರವಿ (ದಿನ 3 ಪ್ರದರ್ಶನಗಳು) ನಿರ್ದೇಶನ – ವಿನೋದ್ರಸಿನ್ಹಾ

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ನಾಂದಿ

ಅಪೂರ್ವ 14 4 72 ರಿಂದ

.... ಅತ್ಯಮೋಘ ಕನ್ನಡ ಚಿತ್ರ ....

ಯಾವ ಜನ್ಮದ ಮೈತ್ರಿ

ತಾರಾಗಣ— ಗಂಗಾಧರ್, ಕೆ. ಎಸ್. ಅಶ್ವತ್, ಕಲ್ಪನಾ

ಸಂಗೀತ : ವಿಜಯಭಾಸ್ಕರ ಚಿತ್ರಕಥೆ – ನಿರ್ದೇಶನ : ಗೀತಪ್ರಿಯ

★

Contribute Liberally

to the National Defence Fund

S H A K T I

S U D H A

A Superb Tonic

Edited Printedand Published by Dharmapracharanirata M S Krishna Rao (Proprietor) at the Satyavadi Press Cham raj puram Mysore 4